Os No. 2749/2013
PW 1

ಸಾಕ್ಷಿಯನ್ನು ಕರೆಸಿ ದಿನಾಂಕ ಃ 26.02.2019 ರಂದು ಪ್ರಮಾಣೀಕರಿಸಲಾಯಿತು.

ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿ ಸಂಖ್ಯೆ 8 ಮತ್ತು 9 ರ ಆದೇಶದ ಮೇರೆಗೆ ಪಾಟೀಸವಾಲು ಃ ಪ್ರತಿವಾದಿ ಪರ ವಕೀಲರಿಂದ ಃ

ನಾನು ಪಾಲು ವಿಭಾಗಕೋಸ್ಕರ ದಾವಾ ಸಲ್ಲಿಸಿದ್ದೇನೆ. ನಾನು ಮತ್ತು ನನ್ನ ಗಂಡ ವಕೀಲರ ಕಚೇರಿಗೆ ಹೋಗಿ ದಾವಾ ಸಲ್ಲಿಸಲು ಮಾಹಿತಿ ನೀಡಿದೆವು . ನಾನು ಮತ್ತು ನನ್ನ ಗಂಡ ದಾಖಲೆಗಳನ್ನು ಸಲ್ಲಿಸಿದೆವು . ನಾನು ಪಿಯು ಓದಿದ್ದೇನೆ. ನಮ್ಮ ವಕೀಲರ ಕಚೇರಿಯ ವಿಳಾಸ ನನಗೆ ಗೊತ್ತಿಲ್ಲ. ಈ ದಾವಾವನ್ನು ಸಲ್ಲಿಸಲು ನನ್ನ ಗಂಡ ನನಗೆ ಬಲವಂತದಿಂದ ದಾವಾ ಸಲ್ಲಿಸಲು ತಿಳಿಸಿದರು ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಒದಗಿಸಿದ್ದೇನೆ. ನನ್ನ ತಂದೆಯ ಹೆಸರು ಡಿ ಆರ್ ರಾಮಚಂದ್ರ ರಾವ್ . ನನ್ನ ತಾಯಿಯ ಹೆಸರು ಸುಭದ್ರಮ್ಮ. ದಾವಾ ಸಲ್ಲಿಸುವುದಕ್ಕಿಂತ ಮೊದಲು ನನ್ನ ತಂಗಿಯರಿಗೂ ಸಹ ನೋಟೀಸ್ ನೀಡಿದ್ದೇನೆ. ನಾನು ನನ್ನ ತಂಗಿಯರಿಗೆ ನೀಡಿದ ನೋಟೀಸಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೂ ಇಲ್ಲವೂ ಎಂದು ನನಗೆ ಗೊತ್ತಿಲ್ಲ. ನಾನು ನೀಡಿದ ನೋಟೀಸ್‌ಗೆ ಮರು ಉತ್ತರ ಬಂತೂ ಇಲ್ಲವೂ ಎಂದು ನನಗೆ ಗೊತ್ತಿಲ್ಲ. ನಾನು ನೋಟೀಸ್ ನೀಡಿಲ್ಲದೇ ಇರುವುದರಿಂದ ನನ್ನ

ತಂಗಿಯರು ನನಗೆ ಮರು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯರಿಗೆ ಒಟ್ಟು 4 ಜನ ಮಕ್ಕಳು . ಅವರುಗಳೆಂದರೆ ಡಿ ಆರ್ ಕೃಷ್ಣ ಪ್ರಸಾದ್ , ನಾನು , ಪದ್ಮಿನಿ ಮತ್ತು ಕುಮುದಿನಿ. ನನ್ನ ತಂದೆಯ ವಂಶವೃಕ್ಷವನ್ನು ಹಾಜರುಪಡಿಸಲು ನಾನು ಸಿದ್ದನಿದ್ದೇನೆ. ನನ್ನ ತಂದೆ ತಾಯಿಯರಿಗೆ ಒಟ್ಟು 5 ಜನ ಮಕ್ಕಳು ಎಂದರೆ ಸರಿ . ಸಾಕ್ಷಿಯು ಮುಂದುವರೆದು ಜನಾರ್ಧನ್ ಎನ್ನುವವರು 22 – 23 ವಯಸ್ಸು ಇದ್ದಾಗ ತೀರಿಕೊಂಡರು. ಅವರಿಗೆ ಮದುವೆಯಾಗಿರಲಿಲ್ಲ. ನನ್ನ ತಂದೆ ವಕೀಲರು ಆಗಿದ್ದರು . ಸಾಕ್ಷಿಯು ಮುಂದುವರೆದು ನಮ್ಮ ತಂದೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಸಹೋದರ ಜನಾರ್ಧನ್‌ರವರ ಮರಣ ಸಮರ್ಥನ ಪತ್ರವನ್ನು ಹಾಜರು ಪಡಿಸಲು ಸಾಧ್ಯವಾಗುವುದಿಲ್ಲ. ನನ್ನ ತಾಯಿಯವರು 1972 ರಲ್ಲಿ ನಿಧನ ಹೊಂದಿರುತ್ತಾರೆ. ನನ್ನ ತಂದೆಯವರು 1995 ರಲ್ಲಿ ನಿಧನ ಹೊಂದಿದ್ದಾರೆ . ಅವರುಗಳ ಮರಣ ಸಮರ್ಥನ ಪತ್ರವನ್ನು ನಾನು ಹಾಜರುಪಡಿಸಿಲ್ಲ. ನನ್ನ ತಾತನ ಹೆಸರು ರಘುನಾಥ ರಾವ್ . ಅವರಿಗೆ ಪಿತ್ರಾರ್ಜಿತ ಆಸ್ತಿ ಇರಲಿಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ ಪಿಂಚಣಿ ಮಾತ್ರ ಬರುತ್ತಿತ್ತು ಎಂದು ಹೇಳುತ್ತಾರೆ . ನಮ್ಮ ತಂದೆಗೆ

ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿ . ದಿ : 22.03.2013 ನಲ್ಲಿ ನಾನು ಡಿ ಆರ್ ಕೃಷ್ಣ ಪ್ರಸಾದ್ ನೋಟೀಸ್ ನೀಡಿದೆನು ಎಂದರೆ ಸರಿ . ಅವರಿಂದ ಮರು ಉತ್ತರ ದಿ : 26.03.2013 ರಲ್ಲಿ ಬಂದಿತ್ತು ಎಂದರೆ ಸರಿ . ಮರು ಉತ್ತರವನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಸದರಿ ನೋಟೀಸ್‌ಗೆ ನಾನು ಪ್ರತ್ಯುತ್ತರವನ್ನು ನೀಡಿಲ್ಲ. 1949 ರಲ್ಲಿ ಸಿಐಟಿಬಿ ಯಿಂದ ನೋಟೀಸ್ ಬಂದಿತ್ತು ಎಂದರೆ ಸರಿ . ನನ್ನ ಮದುವೆಯಾಗುವವರೆಗೂ ನನ್ನ ತಂದೆಯ ಜೊತೆ ದಾವಾ ಸ್ವತ್ತಿನಲ್ಲಿ ವಾಸವಿದ್ದೆನು. ನನ್ನ ಮದುವೆ 1970 ರಲ್ಲಿ ಆಯಿತು . 1973 ರಲ್ಲಿ ಪದ್ಮಿನಿಯವರ ಮದುವೆಯಾಯಿತು . ಕುಮುದಿನಿಯವರ ಮದುವೆ ಯಾವಾಗ ಆಯಿತು ಎಂದು ಮರೆತು ಹೋಗಿದೆ. ನನ್ನ ಅಣ್ಣ ಡಿ ಆರ್ ಕೃಷ್ಣ ಪ್ರಸಾದ್ ರವರು ಹೆಚ್ ಎ ಎಲ್ ನಲ್ಲಿ ಕೆಲಸ ನಿರ್ವಹಿಸಿದ್ದರು . ನಾನು ಮದುವೆಯಾದ ನಂತರ ಸತ್ಯಮಂಗಳ , ತಮಿಳುನಾಡಿನಲ್ಲಿ ವಾಸವಿದ್ದೆನು . ನಾನು ಈಗ ನನ್ನ ಮಗಳ ಜೊತೆ ಹೊಸೂರುನಲ್ಲಿ ವಾಸವಿದ್ದೆನೆ. ಅದರ ವಿಳಾಸ ನಂಬರ್ 95 , ನಂಜುಂಡೇಶ್ವರ ನಗರ , ಹೊಸೂರು , ತಮಿಳುನಾಡು ಆಗಿರುತ್ತದೆ. ನನಗೆ 5 ಜನ ಹೆಣ್ಣು ಮಕ್ಕಳು. ನನ್ನ ಇಬ್ಬರು ಹೆಣ್ಣು ಮಕ್ಕಳ ಮದುವೆಯನ್ನು ನಮ್ಮ ತಂದೆ ನೆರವೇರಿಸಿದರು. ಉಳಿದ ಮೂವರು ಹೆಣ್ಣು ಮಕ್ಕಳ

ಮದುವೆಯನ್ನು ನನ್ನ ಅಣ್ಣ ಮತ್ತು ಅಣ್ಣನ ಮಗನ ಆರ್ಥಿಕ ಸಹಾಯದಿಂದ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಮದುವೆ ಮಾಡಿದ್ದೇವೆ ಎಂದು ಹೇಳುತ್ತಾರೆ . ನಮ್ಮ ತಂದೆ ವಕೀಲ ವೃತ್ತಿಯನ್ನು ಬಿಟ್ಟು ಬ್ಯಾಂಕಿನಲ್ಲಿ ಲಾ ಆಫೀಸರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ತಂದೆಯ ಬರವಣಿಗೆ ಮತ್ತು ಸಹಿಯನ್ನು ನಾನು ಗುರುತಿಸುತ್ತೇನೆ . ನಮ್ಮ ತಂದೆ ನಿಧನ ಹೊಂದುವ 4 ತಿಂಗಳ ಮುಂಚೆ ನಾಸಿಕ್‌ನಲ್ಲಿ ಭೇಟಿಯಾಗಿದ್ದೆನು . ನನ್ನ ತಂದೆಯನ್ನು 8 ವರ್ಷಕ್ಕೊಮ್ಮೆ ನಾಸಿಕ್‌ನಲ್ಲಿ ಭೇಟಿಯಾಗುತ್ತಿದ್ದೆನು. ನನ್ನ ತಂದೆ ತನ್ನ ಮಗನ ಜೊತೆ ಅಂದರೆ ಡಿ ಆರ್ ಕೃಷ್ಣ ಪ್ರಸಾದ್ ರವರ ಜೊತೆ ವಾಸವಾಗಿದ್ದರು .ನನ್ನ ತಂದೆ ಮೊದಲು ದಿನಚರಿ ಬರೆಯುವ ಅಭ್ಯಾಸವಿದ್ದು ನಂತರ ದಿನಚರಿ ಬರೆಯುವ ಅಭ್ಯಾಸವನ್ನು ಬಿಟ್ಟರು. ಸಾಕ್ಷಿಯು ಮುಂದುವರೆದು ದೇವರ ನಾಮ ಬರೆಯುತ್ತಿದ್ದರು ಎಂದು ಹೇಳುತ್ತಾರೆ. ಈಗ ತೋರಿಸಿದ ದಿನಚರಿ ಪುಸ್ತಕದಲ್ಲಿ ನನ್ನ ತಂದೆಯ ಬರವಣಿಗೆ ಇರುವುದಿಲ್ಲ. ನನ್ನ ತಂದೆಗೆ ನಾನು ಕಾಗದ ಪತ್ರ ಬರೆದಿರುವುದಿಲ್ಲ ಮತ್ತು ಅವರು ಸಹ ನನಗೆ ಕಾಗದ ಪತ್ರ ಬರೆದಿರುವುದಿಲ್ಲ . ಈಗ ತೋರಿಸಿದ ದಿನಚರಿ ಪುಸ್ತಕದಲ್ಲಿ ನನ್ನ ತಂದೆಯ ಬರವಣಿಗೆ ಮಾಡಿದರೂ ಸಹ ಇಲ್ಲ ಎಂದು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನನ್ನ ತಂದೆಯು ಬರೆದ ಬರವಣಿಗೆಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಾಗುವುದಿಲ್ಲ. ಈಗ ತೋರಿಸಿದ ಅಂಚೆ ಕಾಗದದಲ್ಲಿ ನನ್ನ ತಂದೆ ಬರವಣಿಗೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಂದೆಯ ಸಹಿ ಮತ್ತು ಬರವಣಿಗೆಯನ್ನು ನಾನು ನೋಡಿಲ್ಲದೇ ಇರುವ ಕಾರಣ ನನ್ನ ತಂದೆಯ ಸಹಿ ಮತ್ತು ಬರವಣಿಗೆಯನ್ನು ಗುರುತು ಹಿಡಿಯಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲವಕಾಶವನ್ನು ಕೋರಿದ್ದು ಸಮಯವನ್ನು ನೀಡಲಾಯಿತು.

(ನನ್ನ ಉಖ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ನಾಗವೇಣಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .